**ಆರ್.ಎ.14/2024, ಪಿ.ಡಬ್ಲೂ-1 ಹೆಸರುಃ ತಿಮ್ಮಪ್ಪ**

**ದಿಃ15-07-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಜಿ ಹೆಚ್ ಎಸ್ ವಕೀಲರಿಂದಃ**

ನಿಪಿ-27 ರ ವಂಶವೃಕ್ಷದಲ್ಲಿ ನನ್ನ ಸಹೋದರಿಯ ಹೆಸರನ್ನು ಸೇರಿಸಿಲ್ಲ ಎಂದರೆ ಸಾಕ್ಷಿ ನನ್ನ ತಂಗಿ ವಿವಾಹವಾಗಿ ಆಕೆಯ ಪತಿಯ ಮನೆಯಲ್ಲಿದ್ದು, ಹಾಗಾಗಿ ಸೇರಿಸಿಲ್ಲ ಎಂದು ಹೇಳುತ್ತಾರೆ. ದಾವಾ ಸ್ವತ್ತು ನಮಗೆ ನಮ್ಮ ತಾಯಿಯಿಂದ ಬಂದಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿಗೆ ನನ್ನ ತಂಗಿಯೂ ಸಹ ನನ್ನ ತಾಯಿಯ ವಾರಸುದಾರರಾಗಿ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಣ್ಣನಾದ ತಿಪ್ಪಣ್ಣರವರ ಸ್ವತ್ತನ್ನು ನನ್ನ ಅಣ್ಣ ನನ್ನ ತಂಗಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿ ನಾನು ಮತ್ತು ನನ್ನ ಅಣ್ಣ ಸೇರಿ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಆ ಬಗ್ಗೆ ನೋಂದಣಿ ದಾಖಲಾತಿ ಇದೆ. ನಾನು ಹಾಜರುಪಡಿಸಿರುವ ನಿಪಿ-29 ರ ದಾಖಲಾತಿಯಂತೆ ನನ್ನ ತಂಗಿಯಾದ ಹಾಲಮ್ಮರವರಿಗೂ ಸಹ ಸ್ವತ್ತು ಇದೆ ಎಂದರೆ ಸರಿ. ನನ್ನ ತಂಗಿಯ ಪತಿಯ ಹೆಸರು ಹುಲುಗಬೋವಿ. ನಿಪಿ-29 ರಲ್ಲಿ ನಮೂದಿಸಿರುವ ಹಾಲಮ್ಮ ಕೋಂ ಉಗ್ರಪ್ಪ ಎಂದರೆ ನನ್ನ ತಂಗಿಗೆ ಸೇರಿದ್ದಲ್ಲ ಎಂದರೆ ಸಾಕ್ಷಿ ನನ್ನ ತಂಗಿಗೆ ಸೇರಿದ್ದು, ಆ ರೀತಿ ತಪ್ಪಾಗಿದೆ ಎಂದು ಹೇಳುತ್ತಾರೆ.

2. ನಿಪಿ-31 ಮತ್ತು 32 ರ ಕಂದಾಯ ದಾಖಲಾತಿಗಳು ಏರ್ಪಟ್ಟಿರುವ ಬಗ್ಗೆ ಪಾಲು ವಿಭಾಗ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಾವು ಗ್ರಾಮದಲ್ಲಿಯೇ ಪಂಚಾಯತಿದಾರರ ಸಮಕ್ಷಮ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. ನಿಪಿ-32 ರ ದಾಖಲಾತಿಯಂತೆ ಸರ್ವೇ ನಂ.56/1 ರಲ್ಲಿ 4 ಎಕರೆ ಜಮೀನು ಇದೆ ಎಂದರೆ ಸರಿ. ನಿಪಿ-33 ರಲ್ಲಿ ನಮೂದಿಸಿರುವ ಪ್ರಕಾರ 3 ಗುಂಟೆ ಖರಾಬಿನ ಜಾಗದಲ್ಲಿ ಪ್ರತಿವಾದಿಯರು ರಸ್ತೆಯನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-33 ರ ಪ್ರಕಾರ 3 ಗುಂಟೆ ಸ್ವತ್ತು ಬಿ-ಖರಾಬಿನ ವ್ಯಾಪ್ತಿಯಲ್ಲಿ ಒಳಪಟ್ಟಿದ್ದು, ಸದರಿ ಜಾಗದಲ್ಲಿಯೇ ರಸ್ತೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಹಿಂದೆ ಖರಾಬಿನ ಜಾಗದಲ್ಲಿ ಇದ್ದಂತಹ ದಾರಿಯನ್ನು ಈಗ ಪ್ರತಿವಾದಿಯರು ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-26 ರ ನೋಂದಣಿ ಕ್ರಯ ಪತ್ರದಂತೆ ಉತ್ತರಕ್ಕೆ ರಸ್ತೆ ಎಂದು ಇದೆ ಎಂದರೆ ಸಾಕ್ಷಿ ನಮ್ಮ ಜಮೀನಿನ ನಂತರ ರಸ್ತೆ ಇದೆ ಎಂದು ಹೇಳುತ್ತಾರೆ. ಸದರಿ ರಸ್ತೆಯಿಂದ ದಕ್ಷಿಣಕ್ಕೆ ಬೇಲಿ ಮತ್ತು ಹುಣಸೇ ಗಿಡಗಳು ಇವೆ ಎಂದರೆ ಸಾಕ್ಷಿ ನಮ್ಮ ಜಮೀನಿನಲ್ಲಿ ಇವೆ ಎಂದು

ಹೇಳುತ್ತಾರೆ. ಪ್ರತಿವಾದಿಯರು ನಾನು ಹಾಜರುಪಡಿಸಿರುವ ದಾಖಲಾತಿಗಳಂತೆಯೇ ನಮ್ಮ



ಜಮೀನಿನ ಉತ್ತರ ಭಾಗದಲ್ಲಿ ಇರುವ ಖರಾಬಿನ ಜಾಗದಲ್ಲಿನ ದಾರಿಯಲ್ಲಿ ರಸ್ತೆಯನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ